# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಎಡಿಸ್ ಆರ್.ಇ.ವಿ.ಎಸ್.ಆರ್: 19/15-16

ದಿನಾಂಕ : 25-10-2016.

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ

ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| 1. ಶ್ರೀಮತಿ ಶಾಲಿನಿ<br>ಕೋಂ ಕೃಷ್ಣಪ್ಪ ಗೌಡ<br>2. ರೋಹಿತ್ ಕೆ<br>ಬಿನ್ ದಿ\| ಕೃಷ್ಣಪ್ಪ ಗೌಡ,<br>ಅಲೆಂಬಾಡಿ ಒಳಮೊಗ್ರು,<br>ಪುತ್ತೂರು ತಾಲೂಕು ದ.ಕ.<br>(ನ್ಯಾಯವಾದಿ ಶ್ರೀ ಚಿದಾನಂದ ಬೈಲಾಡಿ) | - ಮತ್ತು - | 1. ತಹಶೀಲ್ದಾರರು<br>ಬೆಳ್ತಂಗಡಿ ತಾಲೂಕು ದ.ಕ.<br>2. ಶೀನ ಗೌಡ<br>ಬಿನ್ ತಿಮ್ಮಯ್ಯ ಗೌಡ,<br>ಕೋಚುಕುಮೇರು ಮನೆ,<br>ಉರುವಾಲು ಗ್ರಾಮ,<br>ಬೆಳ್ತಂಗಡಿ ತಾಲೂಕು ದ.ಕ. |

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 49 ರ ಮೇರೆಗೆ ಬೆಳ್ತಂಗಡಿ ತಾಲೂಕು ಉರುವಾಲು ಗ್ರಾಮದ ಎನ್.ಸಿ.ಆರ್.ಸಿಆರ್: 137/14-15 ರಂತೆ ತಹಶೀಲ್ದಾರರು ನೀಡಿದ ಹಿಂಬರಹ ಪ್ರಶ್ನಿಸಿ ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಉರುವಾಲು ಗ್ರಾಮದ ಸ.ನಂ. 130/1A2 ರ ಪೈಕಿ ವಿಸ್ತೀರ್ಣ 2.91 ಎಕ್ರೆ ಜಮೀನನ್ನು ಇವರುಗಳು ಜೊತೆಯಾಗಿ ಹೊಂದಿದ್ದು, ಒಂದೇ ಕುಟುಂಬದವರಾಗಿದ್ದು, ಅಕ್ರಮ ಸಕ್ರಮದಂತೆ ಜಂಟಿಯಾಗಿ ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಿದ್ದರು. ಅಕ್ರಮ ಸಕ್ರಮದಂತೆ ಜೊತೆಯಾಗಿ ಜಮೀನು ಮಂಜೂರಾತಿಗೆ ಅರ್ಜಿ ಸಲ್ಲಿಸಿದ್ದರು. ಈ ಮಧ್ಯೆ ಕೃಷ್ಣಪ್ಪ ಗೌಡರು ಮೃತರಾಗಿರುತ್ತಾರೆ. ನಂತರ ಶೀನಪ್ಪ ಗೌಡರೊಬ್ಬರ ಹೆಸರಲ್ಲಿ ಸಾಗುವಳಿ ಚೀಟಿ ನೀಡಿರುತ್ತಾರೆ. ಅಪೀಲುದಾರರ ಗಂಡ ಕೃಷ್ಣಪ್ಪ ಗೌಡರ ಹೆಸರು ಸೇರಿಸಲು ಬಿಟ್ಟು ಹೋಗಿರುತ್ತದೆ. ಪ್ರತಿವಾದಿಯೊಬ್ಬರ ಹೆಸರಲ್ಲಿ ಸಾಗುವಳಿ ಚೀಟಿ ಮಂಜೂರು ಮಾಡಿದ್ದು ತಪ್ಪಾಗಿರುತ್ತದೆ. NCRCR: 137/14-15 ರಂತೆ ನೀಡಿದ ಮನವಿಯನ್ನು ತಹಶೀಲ್ದಾರರು ತಳ್ಳಿ ಹಾಕಿದ್ದು, ಸಾಗುವಳಿ ಚೀಟಿಯಲ್ಲಿ ಹೆಸರು ಸೇರಿಸಲು ಅವಕಾಶವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಆದ ಕಾರಣ NCRCR: 137/14-15 ರ ಹಿಂಬರಹ ರದ್ದುಪಡಿಸಿ, ಉರುವಾಲು ಗ್ರಾಮದ ಸ.ನಂ. 130/1A2 ರಲ್ಲಿ 2.91 ಎಕ್ರೆ ಆಸ್ತಿಯನ್ನು ಪ್ರತಿವಾದಿ ಹಾಗೂ ಅಪೀಲುದಾರರ ಹೆಸರಲ್ಲಿ ಜಂಟಿಯಾಗಿ ನೀಡಬೇಕೆಂದು

ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 52 ಹಾಗೂ ಕಾಲಮಿತಿ ಅಧಿನಿಯಮದ ಕಲಂ 5 ರಡಿ ವಿಳಂಬ ವಿನಾಯ್ತಿಗೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 07-07-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ: 07-06-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ತಹಶೀಲ್ದಾರರ NCRCR: 137/2014-15 ರ ಆದೇಶವನ್ನು ರದ್ದುಪಡಿಸಿ ಬೆಳ್ತಂಗಡಿ ತಾಲೂಕು ಉರುವಾಲು ಗ್ರಾಮದ ಸ.ನಂ. 130/1A2 ರಲ್ಲಿ 2.91 ಎಕ್ರೆ ಆಸ್ತಿಯನ್ನು ಪ್ರತಿವಾದಿಯ ಹೆಸರಿನೊಂದಿಗೆ ಅಪೀಲುದಾರರ ಹೆಸರನ್ನು ಜಂಟಿಯಾಗಿ ಸೇರಿಸಿ ಸಾಗುವಳಿ ಚೀಟಿಯನ್ನು ನೀಡಲು ಆದೇಶ ಮಾಡುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಉರುವಾಲು ಗ್ರಾಮದ NCR: 203/91-92 ರಂತೆ ಶಿನಪ್ಪ ಗೌಡರ ಹೆಸರಲ್ಲಿ ಸ.ನಂ. 130/1A2 ವಿಸ್ತೀರ್ಣ 2.91 ಎಕ್ರೆ ಅಕ್ರಮಿತ ಜಾಗದ ಬಗ್ಗೆ ಸಾಗುವಳಿ ಚೀಟಿ ನೀಡಲಾಗಿದೆ. ದಿ| ಕೃಷ್ಣಪ್ಪ ಗೌಡ ಹಾಗೂ ಶೀನ ಗೌಡರು ತಿಮ್ಮಯ್ಯ ಗೌಡರ ಮಕ್ಕಳಾಗಿದ್ದು, ಈ ಪೈಕಿ ಮೇಲ್ಮನವಿದಾರರ ಗಂಡ ಕೃಷ್ಣಪ್ಪ ಗೌಡರು ಮೃತ ಪಟ್ಟಿರುತ್ತಾರೆ. ಕೃಷ್ಣಪ್ಪ ಗೌಡರ ಮರಣಾ ನಂತರ ಅವರ ಸಹೋದರ ಶೀನ ಗೌಡರ ಹೆಸರಲ್ಲಿ ಮಾತ್ರ ಸಾಗುವಳಿ ಚೀಟಿ ನೀಡಲಾಗಿದೆ. ಕೃಷ್ಣಪ್ಪ ಗೌಡ ಹಾಗೂ ಶೀನ ಗೌಡರು ಇಬ್ಬರೂ ಒಂದೇ ತಂದೆಯ ಮಕ್ಕಳಾಗಿದ್ದು, ಮರಣ ಹೊಂದುವ ತನಕ ಒಂದೇ ಮನೆಯಲ್ಲಿ ವಾಸ್ತವ್ಯವಿದ್ದರು. ಆದರೂ ನಮೂನೆ - 50 ರ ಅರ್ಜಿಯನ್ನು ಪ್ರತಿವಾದಿ ಮಾತ್ರ ಸಲ್ಲಿಸಿರುವುದರಿಂದ ಅವರ ಹೆಸರಲ್ಲಿ ಮಾತ್ರ ಸಾಗುವಳಿ ಚೀಟಿ ನೀಡಿರುವುದು ಕಂಡು ಬರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿಕೊಂಡು ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ತಿರಸ್ಕರಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.
ಸಹಾಯಕ ಆಯುಕ್ತರು,
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಚಿದಾನಂದ ಬೈಲಾಡಿ ಪುತ್ತೂರು -ಇವರ ಮುಖಾಂತರ ಜ್ಯಾರಿ.

ಪ್ರತಿ: 2ನೇ ಪ್ರತಿವಾದಿಯವರಿಗೆ ನೋಂದಾಯಿತ ಅಂಚೆ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಕಡತ ಸಂಖ್ಯೆ NCRCR: 137/14-15 ಮತ್ತು 543/91-92 ಪುಟಸಂಖ್ಯೆ 1 ರಿಂದ 22 ರ ತನಕ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ.